# ಬೆಲೆ ಏರಿಕೆ ಮತ್ತು ಆಹಾರದ ಅಭದ್ರತೆ ವಿರುದ್ಧ

CPI(M)

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**

ಕರ್ನಾಟಕ ರಾಜ್ಯ ಸಮಿತಿ

ಪ್ರತಿ ನಿಮಿಷಕ್ಕೂ 5 ಮಂದಿ ಭಾರತೀಯರು ಹಸಿವಿನಿಂದ ಸಾಯುತ್ತಾರೆ. ಅಂದರೆ ಪ್ರತಿದಿನವೂ 7000 ಮತ್ತು ವರ್ಷಕ್ಕೆ 25 ಲಕ್ಷ ಜನ ಭಾರತ ದೇಶದಲ್ಲಿ ಹಸಿವಿನಿಂದ ಸಾಯುತ್ತಾರೆ. ಭಾರತದ ಅಭಿವೃದ್ಧಿಯ ಕಥನದ ಕಟು ವಾಸ್ತವವಿದು.

ಕಾಂಗ್ರೆಸ್ ನೇತೃತ್ವದ ಯುಪಿಎ ಹಾಗೂ ಅದಕ್ಕೂ ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ಅನುಸರಿಸಲಾದ ನವ ಉದಾರೀಕರಣ ನೀತಿಗಳು 90 ರ ದಶಕದ ನಂತರದಲ್ಲಿ ತೀವ್ರ ಆಹಾರದ ಕೊರತೆ, ಹಸಿವು ಹಾಗೂ ಆಹಾರ ಮತ್ತು ಇತರ ಅವಶ್ಯಕ ಸಾಮಗ್ರಿಗಳ ಬೆಲೆ ಏರಿಕೆಯ ಹೊರೆಯನ್ನು ತಂದೊಡ್ಡಿವೆ. 90 ರ ದಶಕದ ಪ್ರಾರಂಭದ ವರೆಗೂ ಅಸ್ತಿತ್ವದಲ್ಲಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಯೋಜಿತವಾದ ರೀತಿಯಲ್ಲಿ ಕುಂಠಿತಗೊಳಿಸಿ ಕ್ರಮೇಣ ನಾಶ ಪಡಿಸಿರುವುದನ್ನು ಈ ಅವಧಿಯಲ್ಲಿ ನಾವು ಕಂಡಿದ್ದೇವೆ. ಭಾರತದಲ್ಲಿನ ಹಸಿವು ಮತ್ತು ಬೆಲೆ ಏರಿಕೆಯ ಪ್ರಮಾಣ ಜಗತ್ತಿನಲ್ಲೇ ಹೆಚ್ಚು; ಆಫ್ರಿಕಾದ ಬಡ ದೇಶಗಳಿಗಿಂತಲೂ ಬಹಳ ಹೆಚ್ಚು. ಜಗತ್ತಿನಲ್ಲಿ ಅಪೌಷ್ಟಿಕತೆಯಿಂದ ಬಳಲುವ ಜನರಲ್ಲಿ ಹೆಚ್ಚಿನವರನ್ನು ಹೊಂದಿರುವ ಕುಖ್ಯಾತಿ ಭಾರತದ್ದು.

**ಅನಿಯಂತ್ರಿತ ಹಾಗೂ ಗಗನಕ್ಕೇರಿದ ಹಣದುಬ್ಬರ**

ಆಹಾರ ಮತ್ತು ಇತರೆ ಅಗತ್ಯ ಸಾಮಗ್ರಿಗಳ ಅನಿಯಂತ್ರಿತ ಬೆಲೆ ಏರಿಕೆಯನ್ನು ತಡೆಗಟ್ಟಲಾಗದಿರುವುದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಪ್ರಮುಖ ವೈಫಲ್ಯಗಳಲ್ಲೊಂದು. 2007 ರ ನಂತರದ 7 ವರ್ಷಗಳ ಸುದೀರ್ಘ ಕಾಲಾವಧಿಯಲ್ಲಿ ಭಾರತ ಎರಡಂಕಿಯ ಆಹಾರ ಹಣದುಬ್ಬರ ಮತ್ತು ಆ ಕಾರಣದಿಂದಾಗಿ ಅಧಿಕವಾಗಿರುವ ಗ್ರಾಹಕ ಬೆಲೆ ಹಾಗೂ ಸಗಟು ಉಬ್ಬರವನ್ನು ಅನುಭವಿಸಿದೆ. ಅದರಲ್ಲೂ ಬಹಳ ಮುಖ್ಯವಾಗಿ ತರಕಾರಿ ಬೆಲೆಗಳು ವಿಪರೀತವಾಗಿ ಹೆಚ್ಚಿವೆ. ಈರುಳ್ಳಿ ಮತ್ತು ಆಲೂಗಡ್ಡೆಗಳ ಬೆಲೆ ಕಿಲೋ ಒಂದಕ್ಕೆ 100 ರೂ. ಗಡಿಯನ್ನು ದಾಟಿದ್ದಿದೆ.

ಗ್ರಾಹಕ ಬೆಲೆ ಸೂಚ್ಯಂಕ ಸರಿಸುಮಾರು ವಾರ್ಷಿಕ ಶೇ. 9 ಕ್ಕಿಂತಲೂ ಹೆಚ್ಚಾಗಿಯೇ ಇದೆ. ಕಳೆದ ಕೆಲವು ತಿಂಗಳಲ್ಲಿ ಜಾಗತಿಕ ಆಹಾರ ಬೆಲೆಗಳು ಇಳಿದಿದ್ದಾಗ್ಯೂ, ಭಾರತದಲ್ಲಿ

ಆಹಾರ ಬೆಲೆಗಳು ಏರುಮುಖ ಕಂಡಿವೆ. ಜಿ–20 ರ ದೇಶಗಳಲ್ಲೇ ಭಾರತ ಅತೀ ಹೆಚ್ಚಿನ ಗ್ರಾಹಕ ಬೆಲೆ ಸೂಚ್ಯಂಕ ದರವನ್ನು ದಾಖಲಿಸಿದೆ. ಏಷಿಯಾದ ಇತರ ದೇಶಗಳನ್ನು ಹೋಲಿಸಿದಾಗಲೂ ಸಹ ಇದೇ ಪರಿಸ್ಥಿತಿ. ಬ್ರೆಝಿಲ್, ರಷಿಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾಗಳನ್ನೊಳಗೊಂಡ ಬ್ರಿಕ್ಸ್ ದೇಶಗಳ ಪೈಕಿ ಭಾರತವೇ ಅತೀ ಹೆಚ್ಚಿನ ಸೂಚ್ಯಂಕ ಏರಿಕೆಯನ್ನು ಕಂಡಿರುವುದು.

**ಗ್ರಾಹಕ ಬೆಲೆ ಸೂಚ್ಯಂಕ**

| **ಬ್ರಿಕ್ಸ್ ದೇಶಗಳು** | |
|---|---|
| ಬ್ರೆಝಿಲ್ | 6.1 |
| ರಷಿಯಾ | 6.5 |
| ದಕ್ಷಿಣ ಆಫ್ರಿಕಾ | 6.4 |
| ಚೀನಾ | 2.6 |
| ಭಾರತ | 10.7 |

| **ಜಿ–20 ದೇಶಗಳು (ಏಶಿಯಾ)** | |
|---|---|
| ಜಪಾನ್ | 0.9 |
| ಕೊರಿಯಾ | 1.5 |
| ಚೀನಾ | 2.6 |
| ಸೌದಿ ಅರೇಬಿಯಾ | 3.7 |
| ಇಂಡೋನೇಷಿಯಾ | 3.7 |
| ಭಾರತ | 10.7 |

(ಆಗಸ್ಟ್ 2013 ರ ಅಂತರ್‍ರಾಷ್ಟ್ರೀಯ ಹಣಕಾಸು ನಿಧಿಯ ವರದಿ)

ಸಹಜವಾಗಿಯೇ ಇದು ಜಗತ್ತಿನ ಎಲ್ಲಾ ಕಡೆಯೂ ನಡೆಯುತ್ತಿರುವ ವಿದ್ಯಮಾನ ಎಂಬ ನೆಪವನ್ನು ಸರ್ಕಾರ ಮುಂದೊಡ್ಡಿರುವುದು ಅಪ್ಪಟ ಸುಳ್ಳೆಂಬುದು ಸ್ಪಷ್ಟವಾಗುತ್ತದೆ. ಭಾರತದ ಜನತೆ ಜಿ.20 ರ ಇತರ ದೇಶಗಳಿಗಿಂತ ಹೆಚ್ಚಿನ ಬೆಲೆ ಏರಿಕೆಯ ಸಂಕಟವನ್ನು ಅನುಭವಿಸಿದೆ.

ಬಡವರಿಗಂತೂ ಬೆಲೆ ಏರಿಕೆಯ ಬಿಸಿ ಇನ್ನಷ್ಟು ಜೋರಾಗಿಯೇ ತಟ್ಟಿದೆ. ಕೃಷಿ ಕೂಲಿಕಾರರ ಗ್ರಾಹಕ ಸೂಚ್ಯಂಕದಲ್ಲಿ ವಿಪರೀತ ಏರಿಕೆಯಾಗಿದೆ. 2010–2013 ರ ಮೂರು ವರ್ಷಗಳ ಈ ಏರಿಕೆ ಶೇ. 34.08 ರಷ್ಟಾಗಿದೆ.

ಆಹಾರ ವಸ್ತುಗಳು ಮತ್ತು ದವಸ ಧಾನ್ಯಗಳ ಬೆಲೆಗಳಲ್ಲಿನ ವಿಪರೀತ ಬೆಲೆ ಏರಿಕೆ ತಡೆಯಿಲ್ಲದೆ ಮುಂದುವರಿಯುತ್ತಿರುವ ಸಂದರ್ಭದಲ್ಲಿ ಹಣದುಬ್ಬರವನ್ನು

ನಿಯಂತ್ರಿಸುವಲ್ಲಿ ಸಫಲರಾಗಿದ್ದೇವೆ ಎಂದು ಯುಪಿಎ ಸರ್ಕಾರ ನಾಚಿಕೆಯಿಲ್ಲದೆ ಕೊಚ್ಚಿಕೊಳ್ಳುತ್ತಿದೆ. . ಹಣದುಬ್ಬರ ಶೇ. 5.5 ಕ್ಕೆ ಇಳಿದಿದೆ ಎಂಬ ಸರ್ಕಾರದ ಬೊಗಳೆ ಜನರನ್ನು ಬಾಧಿಸುತ್ತಿರುವ ನೈಜ ಬೆಲೆ ಏರಿಕೆಯನ್ನು ಮರೆ ಮಾಚುವ ರಾಜಕೀಯ ಮೋಸದಾಟವಲ್ಲದೆ ಬೇರೇನಲ್ಲ. ಏಕೆಂದರೆ ಈ ಬೊಗಳೆಗೆ ಆಧಾರ ಸಗಟು ಬೆಲೆ ಸೂಚ್ಯಂಕ. ಗ್ರಾಹಕರು ಎಂದಿಗೂ ಸಗಟು ಬೆಲೆಗಳಲ್ಲಿ ಕೊಳ್ಳಲಾಗದು, ಆದುದರಿಂದ ಸಗಟು ಬೆಲೆ ಸೂಚ್ಯಂಕ ಅವರ ಪಾಲಿಗೆ ಅರ್ಥವಿಲ್ಲದ್ದು. ವಾಸ್ತವಾದ ಚಿತ್ರಣವನ್ನು ಗ್ರಾಹಕ ಬೆಲೆ ಸೂಚ್ಯಂಕ ನೀಡುತ್ತದೆ. ಏಕೆಂದರೆ ಗ್ರಾಹಕ ತೆರುವುದು ಈ ಬೆಲೆಗಳನ್ನೇ. ಅದೇನಿದ್ದರೂ ಸಗಟು ಬೆಲೆ ಸೂಚ್ಯಂಕದ ಏರಿಕೆಯ ದರ ಕಡಿಮೆಯಾಗಿದೆ ಎಂದು ಕೊಂಡರು ಕೂಡಾ ಅದರರ್ಥ ಬೆಲೆ ಏರಿಕೆಯ ಗತಿ ನಿಧಾನವಾಗಿದೆ ಎಂದು ಮಾತ್ರವಲ್ಲದೆ, ಬೆಲೆಗಳು ಇಳಿಮುಖವಾಗಿದೆ ಎಂದಲ್ಲ.!

**ಬೆಲೆ ಏರಿಕೆಗೆ ಜನರೇ ಕಾರಣ ಎಂಬ ತಪ್ಪು ದೋಷಾರೋಪಣೆ!**

ಜನತೆ ಹೆಚ್ಚು ಹೆಚ್ಚಾಗಿ ಖರೀದಿ ಮಾಡುತ್ತಿರುವುದರ ಮೂಲಕ ಹಣದುಬ್ಬರಕ್ಕೆ ಇಂಬು ನೀಡಿದೆ ಎಂಬ ಸಬೂಬು ನೀಡುವುದರ ಮೂಲಕ ಯುಪಿಎ ಸರ್ಕಾರ ಜನರನ್ನು ಮೋಸ ಮಾಡಲು ಹವಣಿಸಿ, ವಿಪರೀತ ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿನ ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳುವ ಪ್ರಯತ್ನ ನಡೆಸಿತು. ಶೇ. 77 ರಷ್ಟು ಸಂಖ್ಯೆಯ ಜನರ ದೈನಂದಿನ ವೆಚ್ಚ 20 ರೂ. ಗಳಿಗಿಂತಲೂ ಕಡಿಮೆ ಇರುವ ಈ ದೇಶದಲ್ಲಿ, ಯುಪಿಎ ಇಂತಹ ನಿರ್ಲಜ್ಜ ಪ್ರಯತ್ನ ಗಾಯದ ಮೇಲೆ ಉಪ್ಪು ಸವರಿದಂತೆಯೇ ಸರಿ.

ವಾಸ್ತವದಲ್ಲಿ ಪೆಟ್ರೋಲ್, ಡೀಸೆಲ್, ರಸಗೊಬ್ಬರ ಮತ್ತು ಇತರ ಕೃಷಿ ಸಾಮಗ್ರಿಗಳು, ವಿದ್ಯುತ್ ದರಗಳು, ಸಾಗಾಣಿಕಾ ವೆಚ್ಚಗಳು ಇತ್ಯಾದಿ ಸರಕು ಮತ್ತು ಸೇವೆಗಳ ಬೆಲೆಗಳನ್ನು ಏರಿಸುವ ಸರ್ಕಾರದ ಕೆಟ್ಟ ನೀತಿಗಳೇ ಹಣದುಬ್ಬರಕ್ಕೆ ಕಾರಣ. ಸಹಾಯ ಧನದಲ್ಲಿ ಕಡಿತದಿಂದಾಗಿ ಹಣದುಬ್ಬರ ಹೆಚ್ಚಾಗಿ ಆಹಾರ ಬೆಲೆಗಳ ಮೇಲೆ ಪರಿಣಾಮ ಬೀರಿದೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು 'ನಿಯಂತ್ರಣ ಮುಕ್ತ'ಗೊಳಿಸಿದ್ದು ತೈಲ ಕಂಪನಿಗಳ 'ಅಧಿಕ ಲಾಭ'ವನ್ನು ಮತ್ತಷ್ಟು ವೃದ್ಧಿಸಲು ಹಾಗೂ ಇದರಿಂದಾಗಿ ಬೆಲೆಗಳು ದಿನೇ ದಿನೇ ಏರುತ್ತಿದ್ದು ಸಾಗಾಣಿಕ ವೆಚ್ಚಗಳು ವಿಪರೀತವಾಗಿ ಹೆಚ್ಚುತ್ತಿವೆ.

ಯುಪಿಎ ನ ಅಧಿಕಾರದ ಎರಡು ಅವಧಿಯಲ್ಲಿ ಡೀಸೆಲ್‌ನ ಬೆಲೆ ಸರಿ ಸುಮಾರು ಮೂರು ಪಟ್ಟು ಹೆಚ್ಚಾಗಿದೆ. 2004 ರ ಜನವರಿಯಲ್ಲಿ ರೂ. 20 ರಷ್ಟಿದ್ದದ್ದು ಡಿಸೆಂಬರ್ 2013 ರ ವೇಳೆಗೆ ರೂ.55 ರಷ್ಟಾಗಿದೆ. (ದೆಹಲಿಯ ಬೆಲೆಗಳಲ್ಲಿ). ಪೆಟ್ರೋಲ್ ಬೆಲೆಯೂ ದ್ವಿಗುಣಗೊಂಡಿದೆ. 2004 ರ ಜೂನ್‌ನಲ್ಲಿ ರೂ.35 ಇದ್ದದ್ದು, ಡಿಸೆಂಬರ್ 2013 ರಲ್ಲಿ 70 ದಾಟಿದೆ.(ದೆಹಲಿಯ ಬೆಲೆಗಳಲ್ಲಿ). ಜಾಗತಿಕ ಬೆಲೆಗಳ ಏರಿಕೆಯೇ ಈ ಬೆಲೆ

ಹೆಚ್ಚಳಕ್ಕೆ ಕಾರಣ ಎಂಬ ಭ್ರಮೆಯನ್ನು ತೇಲಿಬಿಡಲು ಸರ್ಕಾರ ಪ್ರಯತ್ನಿಸಿದೆ. ಮಾತ್ರವಲ್ಲ ಆಮದು ಸುಂಕ, ಕೇಂದ್ರದ ತೆರಿಗೆ, ಅಬಕಾರಿ ಸುಂಕ ಹಾಗೂ ಮತ್ತಿತರ ಕೇಂದ್ರ ಹಾಗೂ ರಾಜ್ಯಗಳ ತೆರಿಗೆಗಳು ಪೆಟ್ರೋಲ್ ಮೇಲೆ ಶೇ. 40 ರಿಂದ 66 ರಷ್ಟಾಗಿದೆ ಮತ್ತು ಡೀಸೆಲ್ ಬೆಲೆಯಲ್ಲಿ ಶೇ. 20 ರಿಂದ 30 ರಷ್ಟಾಗಿದೆ ಎಂಬುದನ್ನು ಮರೆಮಾಚಲು ಯತ್ನಿಸಿದೆ.

ಡಾಲರ್‌ನ ಹಾಗೂ ಇತರ ನಾಣ್ಯಗಳ ಎದುರು ರೂಪಾಯಿ ಬೆಲೆಯಲ್ಲಿ ತೀವ್ರ ಇಳಿತದ ಪ್ರಕ್ರಿಯೆಯಲ್ಲಿ ಸರ್ಕಾರದ ನಿಷ್ಕಾಳಜಿ ಹಣದುಬ್ಬರ ಇನ್ನಷ್ಟು ಉಲ್ಬಣಗೊಳ್ಳಲು ಎಡೆ ಮಾಡಿಕೊಟ್ಟಿದೆ. ಏಕೆಂದರೆ ಭಾರತ ತೈಲ ಮತ್ತು ರಸಗೊಬ್ಬರಗಳನ್ನು ಆಮದು ಮಾಡಿಕೊಳ್ಳುವಲ್ಲಿ ಅಧಿಕ ಬೆಲೆಯನ್ನು ತೆರಬೇಕಾಗಿದೆ. ಶ್ರೀಮಂತರು ಬಳಸುವ ಐಷರಾಮಿ ಭೋಗ ವಸ್ತುಗಳನ್ನು ಹಾಗೂ ಬಂಗಾರವನ್ನು ಆಮದು ಮಾಡಿಕೊಳ್ಳಲು ನೀಡಿದ ಪರವಾನಗಿಯಿಂದಾಗಿ ಚಾಲ್ತಿ ಖಾತೆಯ ಕೊರತೆ ಇನ್ನಷ್ಟು ಹಿಗ್ಗಿದೆ. ಜೂಜುಕೋರ ಬಂಡವಾಳ ಹೂಡಿಕೆಯನ್ನು ಉದಾರೀಕರಿಸುವುದರ ವಿರುದ್ಧ ಸಿಪಿಐ(ಎಂ) ಪದೆ ಪದೇ ನೀಡಿದ್ದ ಎಚ್ಚರಿಕೆಗಳಿಗೆ ಸರ್ಕಾರ ಕಿವಿಗೊಡದಿದ್ದರ ಪರಿಣಾಮವಾಗಿ ವಿದೇಶಿ ಹೂಡಿಕಾ ಸಂಸ್ಥೆಗಳು ಭಾರತದ ಬಂಡವಾಳ ಮಾರುಕಟ್ಟೆಯಿಂದ ವಿಪರೀತ ಪ್ರಮಾಣದಲ್ಲಿ ಹಿಂತೆಗೆತದ ಕ್ರಮ ನಡೆಸುವುದರ ಮೂಲಕ ರೂಪಾಯಿಯನ್ನು ಮತ್ತಷ್ಟು ದುರ್ಬಲಗೊಳಿಸಿವೆ. ಆದರೆ ಸರ್ಕಾರ ಇಂತಹ ಪ್ರಕ್ಷುಬ್ಧ ಮಾರುಕಟ್ಟೆಯಲ್ಲಿ ಅಪಾರ ಲಾಭವನ್ನು ದೋಚುವ ಜೂಜುಕೋರರಿಗೆ ಇಂಬು ನೀಡುತ್ತಿದೆ. ಅಷ್ಟು ಮಾತ್ರವಲ್ಲ, ಯುಪಿಎ ಸರ್ಕಾರ ಅನಿಯಂತ್ರಿತ ಮುಂಗಡ ವ್ಯಾಪಾರ, ಕಾಳಸಂತೆಕೋರತನ, ಮುಕ್ತ ಮಾರುಕಟ್ಟೆಯ ಖರೀದಿ ಮುಂತಾದ ನೀಚ ಕಾರ್ಯಾಚರಣೆಗಳ ಮೂಲಕ ದೊಡ್ಡ ವ್ಯಾಪಾರಸ್ಥರು ಹಾಗೂ ಜಾಗತಿಕ ಮತ್ತು ದೇಶೀಯ ಕೃಷಿ ವ್ಯವಹಾರ ಸಂಸ್ಥೆಗಳು ಸಟ್ಟಾ ವ್ಯವಹಾರ ಮತ್ತು ಆಹಾರ ಸಂಗ್ರಹಣೆಯಲ್ಲಿ ತೊಡಗಿರುವುದಕ್ಕೆ ನೆರವಾಗುವುದರೊಂದಿಗೆ ಆಹಾರ ಬೆಲೆಗಳ ಮೇಲೆ ಇನ್ನಷ್ಟು ಮೇಲ್ಮುಖ ಒತ್ತಡ ಹೇರಿದೆ.

**ನಿರಂತರವಾದ ಹಸಿವು ಮತ್ತು ಅಪೌಷ್ಟಿಕತೆ :**

ಅಂತರ್ರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆ ಭಾರತದಲ್ಲಿನ ಹಸಿವಿನ ಪ್ರಶ್ನೆಯನ್ನು 'ಅಪಾಯಕಾರಿ' ಎಂದು ವರ್ಗೀಕರಿಸಿದೆ. ರಾಷ್ಟ್ರೀಯ ಮಾದರಿ ಸಮೀಕ್ಷೆಯ ಇತ್ತೀಚಿನ ವರದಿ ಎಡೆಬಿಡದೆ ಸಮುದಾಯಿಕ ಮತ್ತು ವಿಸ್ತೃತವಾದ ಹಸಿವಿನ ಪರಿಸ್ಥಿತಿಯನ್ನು ಎತ್ತಿ ತೋರಿಸಿದೆ.

ಅತ್ಯಂತ ಬಡತನ ಹಾಗೂ ದಾರಿದ್ರ್ಯದ ವಿಭಾಗಗಳ ನಡುವೆ ಕಂಡುಬಂದ ವ್ಯತ್ಯಾಸಗಳನ್ನು ಅದು ಪಟ್ಟಿ ಮಾಡಿದೆ. ಅಂತರ್ ಕ್ಷೇತ್ರೀಯ ವ್ಯತ್ಯಾಸಗಳೂ ಸಹ

ಇವೆ. ಅತ್ಯಂತ ಗಮನಾರ್ಹವಾಗಿ ಕಂಡು ಬಂದ ವಾಸ್ತವವೆಂದರೆ ವಿಶಾಲಸ್ತರದ ಅಭಾವ ಎಲ್ಲಾ ರಾಜ್ಯಗಳಲ್ಲೂ ಕಂಡುಬಂದಿದ್ದು ಬಿಜೆಪಿ ಹಾಗೂ ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳು ಬಹಳ ಹಿಂದಿವೆ.

**ಹಸಿವಿನ ನಿವಾರಣೆ ಅಥವಾ ಹಸಿದವರದ್ದು?**

- ಗ್ರಾಮೀಣ ವಿಭಾಗದಲ್ಲಿ ಶೇ. 80 ರಷ್ಟು ಹಾಗೂ ನಗರಗಳಲ್ಲಿ ಶೇ.64 ರಷ್ಟು ಕುಟುಂಬಗಳು ಶಿಫಾರಸ್ಸು ಮಾಡಲಾದ ನಿರ್ದಿಷ್ಟ ಕ್ಯಾಲೋರಿ ಮಿತಿಗಿಂತಲೂ ಕಡಿಮೆ ಆಹಾರ ಬಳಸುತ್ತಿವೆ. ಜೈವಿಕ ಆಹಾರದ ಮುಖ್ಯ ಸಾವಯವ ಸಂಯುಕ್ತಗಳನ್ನೊಂದಾದ ಪ್ರೋಟೀನ್‌ನ ಬಳಕೆ ಗ್ರಾಮೀಣ ವಿಭಾಗದ ಶೇ. 54 ಮತ್ತು ನಗರ ಪ್ರದೇಶಗಳ ಶೇ. 75 ರಷ್ಟು ಕುಟುಂಬಗಳಲ್ಲಿ ಶಿಫಾರಸ್ಸು ಮಾಡಲಾದ ಮಿತಿಗಿಂತಲೂ ಕಡಿಮೆ ಪ್ರಮಾಣದಲ್ಲಿದೆ.
- ಕನಿಷ್ಠ ಬಡಕುಟುಂಬಗಳು ಬಳಸುವ ಕ್ಯಾಲೋರಿಗಳಲ್ಲಿ ಕೇವಲ ಶೇ. 60 ರಷ್ಟು ಮತ್ತು ಪ್ರೋಟೀನ್ ಸಂಯಕ್ತದಲ್ಲಿ ಕೇವಲ ಶೇ. 55 ರಷ್ಟನ್ನು ಮಾತ್ರವೇ ಗ್ರಾಮೀಣ ವಿಭಾಗದ 'ಕಡು ಬಡವರಿಗೆ' ಲಭ್ಯವಾಗಿದ್ದರೆ, ನಗರ ಪ್ರದೇಶಗಳ ಕಡು ಬಡವರಿಗೆ ಇವೆರೆಡು ಕೇವಲ ಶೇ. 63 ರಷ್ಟು ಮಾತ್ರವೇ ಸಿಗುತ್ತಿದೆ.
- 'ಕಡು ಬಡವ'ರಾದ ಜನ ವಿಭಾಗಕ್ಕೆ ಅವರ ಅವಶ್ಯಕತೆಗಿಂತಲೂ ಕಡಿಮೆ ಕ್ಯಾಲೊರಿ ಮತ್ತು ಪ್ರೊಟಿನ್ ಲಭ್ಯವಾಗುತ್ತದೆ. ನಗರ ಪ್ರದೇಶಗಳಲ್ಲಿ ಇದು ಶೇ. 73 ಮತ್ತು ಶೇ. 70 ರಷ್ಟಿದ್ದರೆ, ಗ್ರಾಮೀಣ ವಿಭಾಗದಲ್ಲಿ ಕೇವಲ ಶೇ. 64 ಮತ್ತು ಶೇ. 67 ರಷ್ಟು ಮಾತ್ರವೇ ಇದೆ.
- ಅಭಿವೃದ್ಧಿಯ ದರ ಹೆಚ್ಚಿರುವ ಬಿಜೆಪಿ ಆಡಳಿತೆಯ ಗುಜರಾತ್ ಹಾಗೂ ಕಾಂಗ್ರೆಸ್ ಆಡಳಿತೆಯ ಮಹಾರಾಷ್ಟ್ರ ಬಹಳ ಹೀನವಾದ ಸ್ಥಾನದಲ್ಲಿವೆ.

ಸರ್ಕಾರದ ಘೋಷಣೆಯ ಹೊರತಾಗಿಯೂ, 1972–73 ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸರಾಸರಿ ಆಹಾರ ಸೇವನೆ ಪ್ರತಿದಿನ  ತಲಾ 2246 ಕ್ಯಾಲೊರಿ ಇದ್ದದ್ದು 2009–10ರಲ್ಲಿ 2020ಕ್ಕೆ ಇಳಿದಿದೆ. ಅದೇ ರೀತಿ ನಗರ ಪ್ರದೇಶಗಳಲ್ಲಿ ಅನುಕ್ರಮವಾಗಿ 2107 ಕ್ಯಾಲೊರಿಯಿಂದ 1946 ಕ್ಯಾಲೊರಿಗೆ ಕುಸಿದಿದೆ. ಭಾರತದ ಜನಸಂಖ್ಯೆಯ ಬಹುದೊಡ್ಡ ಪಾಲು ಇಂದಿಗೂ ಹಸಿವಿನ ಜಾಡ್ಯದಿಂದ ನರಳುತ್ತಿದ್ದಾರೆ.

ಎಲ್ಲಾ ವಿಭಾಗದ ಜನರಲ್ಲೂ ಅಪೌಷ್ಟಿಕತೆ ವಿಪರೀತ ಹೆಚ್ಚಿದೆ, ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಮಹಿಳೆಯರಲ್ಲಿ ಎದ್ದುಕಾಣುತ್ತದೆ. ಮಕ್ಕಳು ಅತಿ ಹೆಚ್ಚಿನ ಮಟ್ಟದ ಪೋಷಕಾಂಶಗಳ ಕೊರತೆ ಮತ್ತು

ಕಳಪೆ ಆರೋಗ್ಯವನ್ನು ಹೊಂದಿದ್ದಾರೆ. ಎಲ್ಲಾ ಮೂರೂ ಮಾನದಂಡಗಳಲ್ಲಿ ಅಂದರೆ ಎತ್ತರ–ವಯುಸ್ಸು(ಶಂಟಿಂಗ್), ತೂಕ–ಎತ್ತರ(ವೇಸ್ಟಿಂಗ್) ಮತ್ತು ತೂಕ–ವಯಸ್ಸು(ಅಂಡರ್‌ವ್ವೈಟ್) ಮಕ್ಕಳ ಆರೋಗ್ಯ ನಿರಾಶಾದಾಯಕ. 40 ಅಭಿವೃದ್ಧಿಶೀಲ ದೇಶಗಳಿಗಿಂತ ಭಾರತದಲ್ಲಿ ಮಕ್ಕಳಲ್ಲಿನ ತೂಕದಕೊರತೆ ಅತಿ ಹೆಚ್ಚು, ಬಾಂಗ್ಲಾದೇಶ ಮತ್ತು ನೇಪಾಳಕ್ಕಿಂತಲೂ ಕಳಪೆ. ಭಾರತದಲ್ಲಿ ಶೇ. 48ಮಕ್ಕಳು ಕಡಿಮೆ ತೂಕ ಹೊಂದಿದ್ದು ಆಫ್ರಿಕಾದ ಸಹಾರಾ ಮರುಭೂಮಿಯ 26 ದೇಶಗಳ ಸರಾಸರಿಗಿಂತಲೂ ಎರಡುಪಟ್ಟು ಹೆಚ್ಚಾಗಿದೆ.

**ತೊಟ್ಟಿಕ್ಕುತ್ತಿರುವ ಅಥವಾ ಕರಗಿದ ಆರೋಗ್ಯ**

- ಶಿಶು ಮರಣ ದರ ಶೇ. 48.9 ಇದೆ ಮತ್ತು 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮರಣ ದರ ಶೇ. 59.2 ಇದೆ.
- 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಆರ್ಧಭಾಗ (ಶೇ. 48) ನಿರಂತರ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ ಮತ್ತು ಅವರ ವಯೋಮಾನಕ್ಕೆ ತೀರ ಕುಳ್ಳ ಅಥವಾ ಕುಬ್ಜರಾಗಿದ್ದಾರೆ.
- 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಪ್ರತಿ 5 ಮಕ್ಕಳಲ್ಲಿ ಒಬ್ಬರು ಎತ್ತರಕ್ಕೆ ತಕ್ಕಂತೆ ದೇಹವಿಲ್ಲದೆ ತೆಳ್ಳಗಿದ್ದಾರೆ.
- 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಶೇ. 43 ಮಕ್ಕಳು ವಯೋಮಾನಕ್ಕಿಂತ ಕಡಿಮೆತೂಕ ಹೊಂದಿದ್ದಾರೆ.
- 6 ರಿಂದ 59 ತಿಂಗಳ ವಯಸ್ಸಿನ ಪ್ರತಿ 10 ಮಕ್ಕಳಲ್ಲಿ 7 ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.
- ಶೇ. 36 ಮಹಿಳೆಯರಲ್ಲಿ ಹಾಗೂ ಶೇ. 34 ಪುರುಷರಲ್ಲಿ ಅಪೌಷ್ಟಿಕತೆ ಇದ್ದು ಶೇ. 18.5 ಕಿಂತಲೂ ಕಡಿಮೆ ಬಿಎಂಐ ಹೊಂದಿದ್ದು ಪೌಷ್ಟಿಕಾಂಶದ ತೀವ್ರ ಕೊರತೆಯಿಂದ ಬಳಲುತ್ತಿದ್ದಾರೆ.
- ಶೇ. 55 ಕಿಂತಲೂ ಹೆಚ್ಚು ಮಹಿಳೆಯರು ಮತ್ತು ಶೇ. 24 ಕಿಂತಲೂ ಹೆಚ್ಚು ಪುರುಷರು ರಕ್ತಹೀನತೆಯಿಂದ ನರಳುತ್ತಿದ್ದಾರೆ.

**ಆಹಾರೇತರ ವಸ್ತುಗಳ ಏರುತ್ತಿರುವ ವೆಚ್ಚ ಆಹಾರಕ್ಕಾಗಿನ ವೆಚ್ಚವನ್ನು ಕಡಿತಗೊಳಿಸುತ್ತಿವೆ**

ಪ್ರತಿಯೊಬ್ಬ ವ್ಯಕ್ತಿಯ ನಿಜವಾದ ಮಾಸಿಕ ಆಹಾರ ಸೇವನೆ ವೆಚ್ಚ 1972–

73ರಲ್ಲಿ ರೂ.158 ಇದ್ದದ್ದು 2009–10ರಲ್ಲಿ ರೂ.220 ಆಗಿದೆಯಾದರೂ ಸರಾಸರಿ ಕ್ಯಾಲೊರಿ ಸೇವನೆ ಕುಸಿದಿದೆ. ಆಹಾರ ಮತ್ತು ಆರೋಗ್ಯ ರಕ್ಷಣೆ, ಶಿಕ್ಷಣ, ಬಾಡಿಗೆ, ಸಾರಿಗೆ ಮುಂತಾದ ಆಹಾರೇತರ ಸೇವೆಗಳ ಬೆಲೆಯು ಸರ್ಕಾರದ ತಪ್ಪು ನೀತಿಗಳಿಂದಾಗಿ ಏರುತ್ತಿರುವುದೇ ಇದಕ್ಕೆ ಕಾರಣ. ಸಾರ್ವಜನಿಕ ಶಿಕ್ಷಣ, ಆರೋಗ್ಯ ರಕ್ಷಣೆ, ರಿಯಾಯಿತಿ ದರದ ವಸತಿ ಮತ್ತು ಸಾರಿಗೆ ಮುಂತಾದ ಸಾಮಾಜಿಕ ಹೊಣೆಯಿಂದ ಜಾರಿಕೊಳ್ಳುತ್ತಿರುವ ಸರ್ಕಾರವು ಅವುಗಳನ್ನು ಖಾಸಗೀಕರಣ ಮಾಡುತ್ತಿರುವುದರಿಂದ ಕೌಟುಂಬಿಕ ವೆಚ್ಚದ ಮೇಲೆ ತೀವ್ರ ಹೊರೆ ಬೀಳುತ್ತಿದೆ. ಈ ಬೆಲೆ ಏರಿಕೆಯಿಂದಾಗಿ ತಮ್ಮ ಆಹಾರ ಮತ್ತು ಪೌಷ್ಟಿಕಾಂಶವನ್ನು ಕಡಿತಗೊಳಿಸಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ; ಮತ್ತು ಸಾರ್ವಜನಿಕ ವಿತರಣಾ ಪದ್ಧತಿ(ರೇಷನ್ ಕಾರ್ಡು ವ್ಯವಸ್ಥೆ) ಜನರಿಂದ ದೂರವಾಗುತ್ತಿರುವುದೂ ಅವರ ಕಷ್ಟಕೋಟಲೆಯನ್ನು ಹೆಚ್ಚು ಮಾಡಿದೆ. ಇದರ ಪರಿಣಾಮವೇನೆಂದರೆ 1972–73ರಲ್ಲಿ ಆಹಾರೇತರ ಅಗತ್ಯವಸ್ತುಗಳು ಒಟ್ಟು ವೆಚ್ಚದ ಶೇ. 17 ಇದ್ದದ್ದು 2009–10ರಲ್ಲಿ ಶೇ. 25 ಆಗಿದೆ.

ಒಂದು ದೇಶದ ಬಹುಪಾಲು ಜನರು ತೀರ ಕೆಳಮಟ್ಟದ ಆಹಾರ ಸೇವನೆಯ ಸ್ಥಿತಿಯಲ್ಲಿದ್ದರೆ, ತಡೆದುಕೊಳ್ಳಬಹುದಾದ ಆಹಾರ ಭದ್ರತೆಯ ಸಾರ್ವತ್ರಿಕ ವ್ಯವಸ್ಥೆಯ ಪರವಾಗಿ ವಾದ ಮಂಡಿಸುವುದು ಎಷ್ಟು ಅನಿವಾರ್ಯ ಎಂದರೆ ತೀರ ಜಿಗುಟ ಆರ್ಥಿಕ ತಜ್ಞ ಕೂಡ ಅದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ದೊಡ್ಡ ವಿಭಾಗದ ಜನ ನಿರಂತರ ಹಸಿವಿನ ಜಾಡ್ಯಕ್ಕೆ ಒಳಗಾಗುತ್ತಿರುತ್ತಾರೆ. ಭಾರತದ 2013ರ ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರಕಾರ ಜಾಗತಿಕ ಹಸಿವಿನ ಸೂಚ್ಯಾಂಕದಲ್ಲಿ ವಿಶ್ವದ 199 ದೇಶಗಳಲ್ಲಿ ಭಾರತ 94ನೇ ಸ್ಥಾನದಲ್ಲಿದೆ. ಹೀಗಿದ್ದಾಗ್ಯೂ ಕೂಡ, ಸರ್ಕಾರ ಹೇಳ್ತಾ ಇದೆ: ದೇಶದಲ್ಲಿ ಸಾಕಷ್ಟು ಆಹಾರವಾಗಲೀ ಅಥವಾ ಆರ್ಥಿಕ ಸಂಪನ್ಮೂಲಗಳಾಗಲೀ ಇಲ್ಲದ ಕಾರಣ ತಡೆದುಕೊಳ್ಳಬಹುದಾದ ಆಹಾರ ಭದ್ರತೆಯ ಸಾರ್ವತ್ರಿಕ ಪದ್ಧತಿ ಅಸಾಧ್ಯ, ಎಲ್ಲರಿಗೂ ಸಬ್ಸಿಡಿ ದರದಲ್ಲಿ ಆಹಾರ ನೀಡುವ ಸಾರ್ವತ್ರಿಕ ಆಹಾರ ಪದ್ಧತಿಯನ್ನು ಜಾರಿ ಮಾಡಲು ಸಾಧ್ಯವಿಲ್ಲ.

ಇದಕ್ಕಿಂತಾ ದೊಡ್ಡ ವಂಚನೆ ಬೇರೊಂದಿರಲಾರದು.

**ಆಹಾರಧಾನ್ಯಗಳ ಕೊರತೆ ಎಂಬ ಮಿಥ್ಯೆ**

**ಸರ್ಕಾರದ ಸುಳ್ಳು ಸಂಖ್ಯೆ 1. ಪೂರೈಕೆಯ ಇತಿಮಿತಿ: ಸಬ್ಸಿಡಿಯೊಂದಿಗೆ ಸಾರ್ವತ್ರಿಕ ಪಡಿತರ ಪದ್ಧತಿಗೆ ಅಗತ್ಯವಿರುವ ಆಹಾರಧಾನ್ಯಗಳ ಉತ್ಪಾದನೆ ಮತ್ತು ಲಭ್ಯತೆ ಸಾಕಷ್ಟಿಲ್ಲ**

ನಿಜಸಂಗತಿ ಪೂರೈಕೆಯ ಇತಿಮಿತಿಯಲ್ಲ, ಬದಲಿಗೆ ಗೋದಾಮಿನಲ್ಲಿ ಮಿತಿಮೀರಿದ ದಾಸ್ತಾನು! ಕೃಷಿ ಕ್ಷೇತ್ರ ಬಿಕ್ಕಟ್ಟಿನಲ್ಲಿದ್ದರೂ (ಸಾಲದ ಹೆಚ್ಚಳ, ಆತ್ಮಹತ್ಯೆಗಳ

ಏರಿಕೆ ಮತ್ತು ಬೇಸಾಯದಿಂದ ವಿಮುಖರಾಗುತ್ತಿರುವುದು ಬಿಕ್ಕಟ್ಟಿನ ಮೂಲ) 2000 ಇಸವಿಯಿಂದ ಉತ್ಪಾದನೆಯಲ್ಲಿ ಸ್ವಲ್ಪ ಮಟ್ಟಿನ ಏರಿಕೆಯಾಗಿದೆ. ಇದರ ಪರಿಣಾಮವಾಗಿ, 2012–13ರ ಕೃಷಿ ಅವಧಿಯಲ್ಲಿ ಉತ್ಪಾದನೆಯು ದಾಖಲೆಯ 255.4 ಮಿಲಿಯನ್ ಟನ್ನುಗಳನ್ನು ತಲುಪಿತು, ಪ್ರಸ್ತುತ ವರ್ಷದಲ್ಲಿ ಅದು 263 ಮಿಲಿಯನ್ ಟನ್ನುಗಳಾಗುವ ಅಂದಾಜಿದೆ. ಇದು ಭಾರತದ ಸಾಮರ್ಥ್ಯಕ್ಕಿಂತ ಬಹಳ ಕಡಿಮೆಯಾಗಿದ್ದರೂ ಸಹ, ಯಾವುದೇ ರೀತಿಯಿಂದ ಈ ಸಾಧನೆ ಕಳಪೆಯೇನಲ್ಲ.

ಈ ಉತ್ಪಾದನೆಯನ್ನು ತಲಾ ಲಭ್ಯತೆಯನ್ನಾಗಿ ಪರಿವರ್ತಿಸಿದಾಗ (ನಿವ್ವಳ ರಫ್ತು, ಬೀಜ, ಕಾಳು ಹಾಗೂ ಪೋಲಾಗಿದ್ದನ್ನು ಸರಿದೂಗಿಸಿದ ಮೇಲೆ) 2011ರಲ್ಲಿ 164.9 ಕೆ.ಜಿ. ಮಾತ್ರ ಸಿಗುತ್ತದೆ, ಇದು 2008ರ ಗರಿಷ್ಠ 171 ಕೆ.ಜಿ ಗಿಂತ ತೀರ ಕಡಿಮೆ.

**ತುಂಬಿ ತುಳುಕುತ್ತಿರುವ ಕಣಜಗಳು, ಖಾಲಿ ಹೊಟ್ಟೆಗಳು! ಗರಿಷ್ಠ ಹಾಗೂ ಇನ್ನೂ ಏರುತ್ತಿದ್ದ ಧಾನ್ಯ ಸಂಗ್ರಹ** : 2005–06ರಲ್ಲಿ 42 ಮಿಲಿಯನ್ ಟನ್ನಿದ್ದದ್ದು 2012–13ರಲ್ಲಿ 72.26 ಮಿಲಿಯನ್ ಟನ್ನಿಗೆ ಏರಿದ ಸಂಗ್ರಹ ಈಗ 42.8 ಮಿಲಿಯನ್ ಟನ್ ಆಗಿದೆ.(ಸುಗ್ಗಿಯ ಸಂಗ್ರಹಕ್ಕೆ ಮೊದಲು). ಕಾಪು (ಬಫರ್) ಸಂಗ್ರಹಕ್ಕಿಂತಲೂ ಸಾಕಷ್ಟು ಹೆಚ್ಚು ಇದ್ದರೂ, ಏರುತ್ತಿರುವ ಆಹಾರ ಧಾನ್ಯದ ದಾಸ್ತಾನಿನ ಹೊರೆಯಿಂದ ಜರ್ಝರಿತವಾಗಿರುವ ಸರ್ಕಾರ ತನ್ನ ಸಂಗ್ರಹವನ್ನು ವಿತರಿಸುವಲ್ಲಿ ಅಸಮರ್ಥವಾಗಿದೆ. ಪ್ರಸ್ತುತ ದಾಸ್ತಾನು ಮತ್ತು ಪೂರೈಕೆ ಸ್ಥಿತಿ ತೃಪ್ತಿದಾಯಕವಾಗಿದೆ, ಸುಗ್ಗಿಯ ನಂತರ ಉತ್ತಮವಾಗಲಿದೆ. ಈ ಸುವರ್ಣಾವಕಾಶವನ್ನು ಬಳಸಿಕೊಂಡು ದೇಶದ ಬಹುಪಾಲು ಜನರಿಗೆ ಅನುಕೂಲಕರ ದರದಲ್ಲಿ ಕನಿಷ್ಠ ಪ್ರಮಾಣದ ಆಹಾರವನ್ನು ವಿತರಿಸುವ ಮೂಲಕ ಸಾರ್ವತ್ರಿಕರಿಸಬಹುದು ಮತ್ತು ಈ ಮೂಲಕ ಪಡಿತರ ಪದ್ಧತಿಯನ್ನು ವಿಸ್ತರಿಸಬಹುದು. ಆಹಾರದ ಕಣಜಗಳು ತುಂಬಿ ತುಳುಕುತ್ತಾ ಧಾನ್ಯವನ್ನು ರಕ್ಷಿಸಿಡುವ ವ್ಯವಸ್ಥೆ ಹದಗೆಟ್ಟು ಇಲಿ ಹೆಗ್ಗಣಗಳಿಗೆ ಆಹಾರವಾಗುತ್ತಿರುವಾಗ ಮಿಲಿಯಾಂತರ ಜನರು ಪ್ರತಿನಿತ್ಯ ಹಸಿವಿನಿಂದ ನರಳುತ್ತಿದ್ದಾರೆ. ಸರ್ಕಾರಕ್ಕೆ ಮುಜುಗರ ಉಂಟಾಗುವ ಮತ್ತು ಅಪಹಾಸ್ಯಕ್ಕೀಡಾಗುವ ಸ್ಥಿತಿ ಇದಾಗಿದೆ.

ಪ್ರಸ್ತುತ ಸಂಗ್ರಹ 42.7 ಮಿಲಿಯನ್ ಟನ್‌ಗಳಿವೆ. ಇದು ಜೂನ್ 2013ರಲ್ಲಿ ಇದ್ದ 77 ಟನ್‌ಗಳಿಗಿಂತ ಕಡಿಮೆ ಸಂಗ್ರಹವಾಗಿದೆ. (ಜೂನ್ 2012ರಲ್ಲಿ ಎಲ್ಲಾ ದಾಖಲೆಗಳನ್ನು ಮುರಿದ 82 ಮಿಲಿಯನ್ ಟನ್ ಸಂಗ್ರಹವಿತ್ತು.) 2012–2013ರಲ್ಲಿ ನಿಗದಿತ ನೀಡಿಕೆಯ(ಅಲೊಕೇಷನ್) ಪ್ರಮಾಣ 56.36 ಮಿಲಿಯನ್ ಟನ್‌ಗಳಿಂದ ಹೊರತೆಗೆಯುವ(ಉಗ್ರಾಣದಿಂದ ರೇಷನ್ ಅಂಗಡಿಗಳಿಗೆ ಬಿಡುಗಡೆ ಮಾಡಿದ) ಪ್ರಮಾಣ 55.8 ಮಿಲಿಯನ್ ಟನ್ ಆಗಿತ್ತು. ಹೊರತೆಗೆಯುವಿಕೆ ಮತ್ತು ನೀಡಿಕೆಯಲ್ಲಿ ಸ್ಥಗಿತತೆ

ಇರುವಾಗಲೂ ಸಂಗ್ರಹ ಪ್ರಮಾಣದಲ್ಲಿ ಕೊರತೆ ಹೇಗುಂಟಾಯಿತು?

**ಭಾರತದ ಇಲಿ ಹೆಗ್ಗಣಗಳ ನಂತರ  ಸರ್ಕಾರದ ಆದ್ಯತೆ ವಿದೇಶೀ ಹಸು ಹಂದಿಗಳು !**

ದೇಶದಲ್ಲಿ ಯಥೇಚ್ಚವಾಗಿರುವ ಜನರಿಗೆ ಉಣಬಡಿಸುವ ಅಥವಾ ರೈತರಿಂದ ಸಂಗ್ರಹಿಸುವ ಮೂಲಕ ಅವರಿಗೆ ನೆರವಾಗುವ ಬದಲು ನಿರ್ಲಜ್ಜವಾಗಿ, 2012–13ನೇ ಇಸವಿಯಲ್ಲಿ 10 ಮಿಲಿಯನ್ ಟನ್ ಮತ್ತು 2013–14ರ ಮೊದಲ 8 ತಿಂಗಳಿನಲ್ಲಿಯೇ 3 ಮಿಲಿಯನ್ ಟನ್ ಎಂದರೆ 20 ತಿಂಗಳಿನಲ್ಲಿ 13 ಮಿಲಿಯನ್ ಟನ್ ಆಹಾರ ಧಾನ್ಯವನ್ನು ಸರ್ಕಾರ ಹರಾಜು ಹಾಕಿ ರಫ್ತುಮಾಡಿತು. ಈ ಆಹಾರ ಧಾನ್ಯ ಬಳಕೆಯಾಗಿದ್ದಾದರೂ ಯಾರಿಗೆ? ಅಭಿವೃದ್ಧಿ ಹೊಂದಿದ ದೇಶಗಳ ಜಾನುವಾರುಗಳ ಆಹಾರಕ್ಕಾಗಿ!! ದೇಶದ ಬಡಜನರ ಹಸಿದ ಹೊಟ್ಟೆಗೆ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಿ ತನ್ನ ಆಹಾರ ಭದ್ರತೆ ಉದ್ದೇಶವನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಆಹಾರ ಪೂರೈಕೆ ಮಾಡುವ ಬದಲು ಸರ್ಕಾರ ಅಭಿವೃದ್ಧಿ ಹೊಂದಿದ ದೇಶಗಳ ಜಾನುವಾರುಗಳಿಗೆ ರಫ್ತು ಮಾಡಿತು. ಸಂಗ್ರಹ ಪ್ರಕ್ರಿಯೆ ಕೂಡ ಗಣನೀಯವಾಗಿ ಕುಸಿಯಿತು.

**ಹಣಕಾಸಿನ ಕೊರತೆ ಎಂಬ ಸುಳ್ಳು :**

**ಸರ್ಕಾರೀ ಸುಳ್ಳು # 2 : ಆರ್ಥಿಕ ಮುಗ್ಗಟ್ಟು : ರಿಯಾಯಿತಿ ದರದಲ್ಲಿ ಸಾರ್ವತ್ರಿಕ ವಿತರಣೆ ಕಾರ್ಯಸಾಧುವಲ್ಲ. ಇದು ಬಹಳ ತುಟ್ಟಿಯಾಗುತ್ತದೆ ಯಾಕೆಂದರೆ ಸರ್ಕಾರದ ಬಳಿ ಅದಕ್ಕೆ ಅಗತ್ಯವಾದ ಹಣವಿಲ್ಲ.**

ಹಸಿದವರಿಗೆ ಖಾಲೀ ಭಂಡಾರ, ಶ್ರೀಮಂತರಿಗೆ ಯಥೇಚ್ಚ ಕೊಡುಗೆಗಳು! ವಿತರಣೆಯನ್ನು ಹೆಚ್ಚು ಮಾಡಿ ಹಸಿವನ್ನು ದೂರಮಾಡಲು ಆಹಾರ ಪದಾರ್ಥ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ಕೆಳಗಿಳಿಸಬೇಕಾದುದು ಬಹಳ ಮುಖ್ಯ. ಹಸಿವನ್ನು ಹೊಡೆದೋಡಿಸಬೇಕೆಂದರೆ ಎಲ್ಲರಿಗೂ ಸಾರ್ವತ್ರಿಕ ಪಡಿತರ ವ್ಯವಸ್ಥೆಯಡಿಯಲ್ಲಿ ಎಲ್ಲಾ ಜೀವನಾವಶ್ಯಕ ವಸ್ತುಗಳು ಸಿಗಬೇಕು. ಆದರೆ ಸರ್ಕಾರ ವಿವೇಚನೆಯಿಲ್ಲದೇ ಆಹಾರಕ್ಕೆ ನೀಡುವ ಸಬ್ಸಿಡಿಯನ್ನು ಕಡಿತಗೊಳಿಸಲು ಒತ್ತುನೀಡುತ್ತಿದೆ. ಬಡತನ ರೇಖೆಯಿಂದ ಕೆಳಗಿರುವ ಸಣ್ಣ ಅಲ್ಪಸಂಖ್ಯೆಯ ಗುಂಪು ಮತ್ತು ಬಡತನ ರೇಖೆಯಿಂದ ಮೇಲಿರುವ ದೊಡ್ಡ ಬಹು ಸಂಖ್ಯೆಯ ಗುಂಪುಗಳಾಗಿ ಜನಸಂಖ್ಯೆಯನ್ನು ವಿಭಜಿಸುವ ಗುರಿನಿರ್ದೇಶಿತ ಪಡಿತರ ವ್ಯವಸ್ಥೆಯು ಸಬ್ಸಿಡಿಯನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಷ್ಟೆ. ಅದೇ ರೀತಿ, ಬಡವರಾಗಿದ್ದರೂ ಸರ್ಕಾರದ ತಪ್ಪು ವಿಧಾನಗಳಿಂದಾಗಿ ಬಿಪಿಎಲ್ ಕಾರ್ಡ್ ಪಡೆಯಲಾಗದ ಎಪಿಎಲ್ ಕಾರ್ಡುದಾರರಿಗೆ ವಿಪರೀತ ಬೆಲೆ ಏರಿಸುವ ಮೂಲಕ ಸಬ್ಸಿಡಿಯನ್ನು ವಂಚಿಸುತ್ತಿರುವುದು ಎರಡನೇ ಹೆಜ್ಜೆ. ಉತ್ತಮ ಪಡಿತರ ವಿತರಣಾ ವ್ಯವಸ್ಥೆಯನ್ನು ಹೊಂದಿರುವ ರಾಜ್ಯಗಳಿಗೆ ಬಿಪಿಎಲ್

ಎಪಿಎಲ್ ಹೆಸರಿನಲ್ಲಿ ಅಗತ್ಯ ಆಹಾರಧಾನ್ಯಗಳನ್ನು ನೀಡದೆ ಕಡಿತಗೊಳಿಸುತ್ತಿರುವುದು ಮೂರನೇ ಹೆಜ್ಜೆ. ಈ ಮೂರೂ ಹೆಜ್ಜೆಗಳು ಒಟ್ಟು ಸೇರಿ ಸರ್ಕಾರದ ಸಬ್ಸಿಡಿ ಬಜೆಟ್ಟನ್ನು ಕಡಿಮೆ ಮಾಡುವ ಹುನ್ನಾರ ಇದಾಗಿದೆ. ಗುರಿ ನಿರ್ದೇಶಿತ ಪಡಿತರ ಪದ್ಧತಿಯು ಅಪಾರ ಸಂಖ್ಯೆಯ ಹಸಿದ ಹಾಗೂ ಅಪೌಷ್ಟಿಕ ಜನರನ್ನು ಪಡಿತರ ವ್ಯವಸ್ಥೆಯಿಂದ ಹೊರಗಿಟ್ಟಿದೆ.

ಅತ್ಯಂತ ಆಘಾತಕಾರಿ ಅಂಶವೆಂದರೆ ಬಡತನ ರೇಖೆಯನ್ನೇ ಎಷ್ಟು ಕೆಳಗೆ ನಿಗದಿಪಡಿಸಿದ್ದಾರೆಂದರೆ, ಗ್ರಾಮೀಣ ಭಾರತಕ್ಕೆ ದಿನಕ್ಕೆ ರೂ.26/– ಮತ್ತು ನಗರ ಪ್ರದೇಶಗಳಿಗೆ ದಿನಕ್ಕೆ ರೂ.32/–, ಈಚಿನ ವರ್ಷಗಳಲ್ಲಿ ಅಪಾರ ಸಂಖ್ಯೆ ಬಡವರು ಬಿಪಿಎಲ್ ಕಾರ್ಡಿನಿಂದ ವಂಚಿತರಾಗಿದ್ದಾರೆ.

ಗುರಿ ನಿರ್ದೇಶಿತ ಪಡಿತರ ವ್ಯವಸ್ಥೆ ಮತ್ತು ರೇಷನ್ ಅಂಗಡಿಗಳಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸಿರುವುದರ ಹಿಂದಿನ ನಿಜವಾದ ಉದ್ದೇಶವೇನೆಂದರೆ ವೆಚ್ಚದಲ್ಲಿ ಕಡಿತ ಮಾಡಿ ಬೊಕ್ಕಸದ ಕೊರತೆಯನ್ನು ಕಡಿಮೆ ಮಾಡುವುದೇ ಆಗಿದೆ. ಬೊಕ್ಕಸದ ಕೊರತೆಯ ಪವಿತ್ರ ಮಿತಿಯೆಂಬ ಅವರ ಆ ಅವಿವೇಕದ ವಾದವನ್ನು ನಾವು ಒಪ್ಪಿದರೂ, ಅದನ್ನು ಸಹಜವಾಗಿಯೇ ಎರಡು ವಿಧಾನಗಳಲ್ಲಿ ಮಾಡಬಹುದು; ತೆರಿಗೆಯನ್ನು ಹೆಚ್ಚಿಸುವ ಮೂಲಕ ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಮತ್ತು ತೆರಿಗೆಯ ರಿಯಾಯಿತಿಗಳನ್ನು ಕಡಿಮೆ ಮಾಡುವ ಮೂಲಕ ಅನಿವಾರ್ಯ ವೆಚ್ಚಗಳನ್ನು ಭರಿಸುವುದು. ಆದರೆ ಇಂತಹ ಪರ್ಯಾಯ ವಿಧಾನಗಳು ನಮ್ಮ ಸರ್ಕಾರಕ್ಕೆ ಅಪಥ್ಯ. ಏಕೆಂದರೆ ಜನಸಮುದಾಯದ ಮೂಲಭೂತ ಸವಲತ್ತುಗಳನ್ನು ಪೂರೈಸಲು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬದಲು, ಹೂಡಿಕೆದಾರರಿಗೆ ಅದರಲ್ಲೂ ವಿದೇಶಿ ಹೂಡಿಕೆದಾರರಿಗೆ ಪ್ರೋತ್ಸಾಹಧನ ನೀಡುವ ತವಕವೇ ನಮ್ಮ ಸರ್ಕಾರಕ್ಕೆ ಹೆಚ್ಚು.

ಅಭಿವೃದ್ಧಿ ಹೊಂದಿದ ಹಲವಾರು ದೇಶಗಳಿಗೆ ಹೋಲಿಸಿದಾಗ, ಭಾರತದ ತೆರಿಗೆ ಮತ್ತು ಜಿಡಿಪಿಯ ಅನುಪಾತ ತೀರ ಕಡಿಮೆ, ಅಂದರೆ ಶೇ.15 (ದಕ್ಷಿಣ ಆಫ್ರಿಕಾ ಶೇ. 26, ರಷ್ಯಾ ಶೇ. 23, ಬ್ರೆಜಿಲ್ ಶೇ. 25.4, ಚೈನಾ ಶೇ.18.9, ಅಮೆರಿಕ ಶೇ. 28 ಮತ್ತು ಸ್ಕ್ಯಾಂಡಿನೇವಿಯನ್ ದೇಶಗಳು ಶೇ. 45–50). ಅಗತ್ಯ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ವಿಫಲವಾಗಿರುವುದನ್ನು ಮರೆ ಮಾಚಲು ನಮ್ಮ ಸರ್ಕಾರವು ಸಬ್ಸಿಡಿಗಳ ಮೊತ್ತವನ್ನು ಹೇಳುವಾಗ ಹಣದುಬ್ಬರವನ್ನು ಗಣನೆಗೆ ತೆಗೆದುಕೊಳ್ಳದೆ ಇಂದಿನ ಬೆಲೆಗಳ ಆಧಾರದಲ್ಲಿ ಲೆಕ್ಕಹಾಕಿ ಹೇಳುತ್ತಿದೆ. ಜಿಡಿಪಿಯ ಬೆಳವಣಿಗೆಯ ದರಕ್ಕೆ ಹೋಲಿಸಬೇಕಾದ ಅಗತ್ಯತೆಯನ್ನೂ ಕೂಡ ಕಡೆಗಣಿಸುತ್ತಿದೆ.

ನಿಜಾಂಶವೇನೆಂದರೆ ಒಂದು ವರ್ಷವನ್ನು ಹೊರತುಪಡಿಸಿದರೆ ಬಹುಪಾಲು ವರ್ಷಗಳಲ್ಲಿ ಸಬ್ಸಿಡಿಗಳು ಜಿಡಿಪಿಯ ಶೇಕಡಕ್ಕಿಂತಲೂ ಕಡಿಮೆಯೇ ಇದೆ. ಅದೂ

ಅಲ್ಲದೆ, 2000ನೇ ದಶಕದಲ್ಲಿ, ಖಾಸಗಿ ಕಾರ್ಪೊರೇಟ್‌ಗಳ ಲಾಭಾಂಶಗಳು ಮತ್ತು ತೆರಿಗೆಯುಕ್ತ ಆದಾಯಗಳು ಏರುತ್ತಿದ್ದಾಗ ಸರ್ಕಾರ ನೀಡಿದ ತೆರಿಗೆ ರಿಯಾಯಿತಿಗಳು ಸಬ್ಸಿಡಿಗಳ ಅನೇಕ ಪಟ್ಟು ಹೆಚ್ಚಿದ್ದವು. ಬಹುಪಾಲು ವರ್ಷಗಳಲ್ಲಿ ಕಾರ್ಪೊರೇಟ್‌ಗಳ ಲಾಭಾಂಶಕ್ಕೆ ನೀಡಿದ ತೆರಿಗೆ ರಿಯಾಯಿತಿಗಳೆ ಆಹಾರ ಸಬ್ಸಿಡಿಯನ್ನು ಮೀರಿಸಿತ್ತು. ತೆರಿಗೆ ಆಮಿಷಗಳೇ 4 ರಿಂದ 6 ಲಕ್ಷ ಕೋಟಿ ರೂಪಾಯಿಗಳು ಅಥವಾ ಜಿಡಿಪಿಯ 5% ರಿಂದ 8% ಆಗಿದ್ದವು. ಸಾರ್ವಜನಿಕ ಪಡಿತರ ಪದ್ಧತಿಯನ್ನು ಜಾರಿ ಮಾಡಲು ಅಂದಾಜು ಮಾಡಿದ ಮೊತ್ತವು ತೆರಿಗೆಗಳನ್ನು ವಸೂಲು ಮಾಡದೆ ಮನ್ನಾ ಮಾಡಿದ ಮೊತ್ತದ ಮೂರನೇ ಒಂದು ಭಾಗ ಇತ್ತು. ಸಮಸ್ಯೆ ಇರುವುದು ಹಣದ ಲಭ್ಯತೆಯಲ್ಲ, ಸಾಮಾಜಿಕ ಆದ್ಯತೆಗಳ ಬಗೆಗಿನ ತಾತ್ಸಾರ ಮತ್ತು ಹೆಚ್ಚುವರಿ ಹಣವನ್ನು ಕ್ರೋಢೀಕರಿಸಿ ತೀರ ಅಗತ್ಯವಿರುವವರಿಗೆ ನೀಡುವಲ್ಲಿನ ರಾಜಕೀಯ ಇಚ್ಛಾಶಕ್ತಿಯ ಕೊರತೆ.

## ಮೋದಿಯ ಗುಜರಾತಿನಲ್ಲಿ

ಗುಜರಾತಿನಲ್ಲಿ, ನರೇಂದ್ರ ಮೋದಿಯ ಸರ್ಕಾರವು ಸಾಮಾಜಿಕ ಆದ್ಯತೆಗಳ ಬಗೆಗಿನ ತಾತ್ಸಾರ ಮತ್ತು ವಿಶೇಷವಾಗಿ ಆಹಾರ ಭದ್ರತೆಯ ವಿಷಯದಲ್ಲಿ ಕೂಡ ಅಷ್ಟೇ ನಾಚಿಕೆಗೇಡಿನ ಸಾಧನೆ ದಾಖಲೆ ಮಾಡಿದೆ, "ಚೈತನ್ಯಭರಿತ ಗುಜರಾತಿ"ನ ಬಗ್ಗೆ ಮೋದಿ ಮಾತನಾಡುತ್ತಾರೆ. ಗುಜರಾತಿನಲ್ಲಿನ ಅಗಾಧ ಮೊತ್ತದ ಹಣ ಹೂಡಿಕೆಯ ಬಗ್ಗೆ ಅವರು ಮಾತನಾಡುತ್ತಾರೆ. ಆದರೆ ಆ ಯಾವುದೇ ಸವಲತ್ತುಗಳನ್ನೂ ಬಡವರಿಗೆ ತಲುಪಿಸಲೇ ಇಲ್ಲ. ಎಡಪಕ್ಷಗಳ ನೇತೃತ್ವದ ರಾಜ್ಯಗಳನ್ನೂ ಒಳಗೊಂಡಂತೆ ಅನೇಕ ರಾಜ್ಯಗಳು ದುರ್ಲಭವಾದ ಸಂಪನ್ಮೂಲಗಳನ್ನು ಆಹಾರ ಭದ್ರತೆಯನ್ನು ವಿಸ್ತರಿಸಲು ಬಳಸಿವೆ. ಅಂತಹ ಯಾವುದೇ ಪ್ರಯತ್ನವನ್ನು ಮೋದಿಯ ಗುಜರಾತ್ ಮಾಡಲಿಲ್ಲ. ಕೇರಳದಲ್ಲಿ, ಎಡಪಕ್ಷಗಳ ಆಡಳಿತದಲ್ಲಿ ಅತಿ ದೊಡ್ಡ ಜನ ವಿಭಾಗಕ್ಕೆ 2 ರೂ ಕೆಜಿಯಂತೆ ಆಹಾರ ಧಾನ್ಯಗಳನ್ನು ನೀಡಲು ಸಾಧ್ಯವಾಗಿದೆ. ಗುಜರಾತ್ ಅತ್ಯಂತ ಶ್ರೀಮಂತ ರಾಜ್ಯ ಎಂದು ಕೊಚ್ಚಿಕೊಳ್ಳುತ್ತಿದ್ದಾಗ್ಯೂ ಮೋದಿಯ ಸರ್ಕಾರ ಬಿಪಿಎಲ್ ಕಾರ್ಡುದಾರರಿಗೂ ಆ ಸೌಲಭ್ಯ ಕೊಡಲಿಲ್ಲ. ಅಲ್ಲಿ 25 ಕೆಜಿ ಗೋಧಿಯಲ್ಲಿ ಕೇವಲ 13 ಕೆಜಿಯನ್ನು ಮಾತ್ರ 2 ರೂಪಾಯಿಗೆ ಮತ್ತು ಉಳಿದ 12 ಕೆಜಿಯನ್ನು 5.40 ರೂ.ಗೆ ನೀಡಲಾಗುತ್ತಿದೆ. 10ಕೆಜಿ ಅಕ್ಕಿಯಲ್ಲಿ 3 ಕೆಜಿಯನ್ನು 3 ರೂಪಾಯಿಯಂತೆ ಮತ್ತು ಉಳಿದ 7 ಕೆಜಿಯನ್ನು 7 ರೂಪಾಯಿಯಂತೆ ವಿತರಿಸುತ್ತಿದ್ದಾರೆ. ಈ ರೀತಿಯಲ್ಲಿ 35 ಕೆಜಿಯ ಗೋದಿ ಮತ್ತು ಅಕ್ಕಿ ಒಬ್ಬ ಬಿಪಿಎಲ್ ಕಾರ್ಡ್‌ದಾರ ರೂ.150/–ನ್ನು ಕೊಡಬೇಕಾಗುತ್ತದೆ. ಎಡ ನೇತೃತ್ವದ ಸರ್ಕಾರದ ರಾಜ್ಯಗಳಲ್ಲಿ ಒಬ್ಬ ಬಿಪಿಎಲ್ ಕಾರ್ಡುದಾರ ತನ್ನ ಒಟ್ಟು ನಿಗದಿತ ಧಾನ್ಯಕ್ಕೆ ಒಂದು ಕೆಜಿಗೆ ಕೇವಲ ಎರಡು ರೂಪಾಯಿ ನೀಡುತ್ತಾನೆ/ಳೆ. ಗುಜರಾತಿನಂಥ ರಾಜ್ಯದಲ್ಲಿ ಎಂತಹ ನಾಚಿಕೆಗೇಡಿನ ನೀತಿ ಅದು?

ಉತ್ತರಪ್ರದೇಶವನ್ನೂ ಒಳಗೊಂಡಂತೆ ಬೇರೆಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಗುಜರಾತಿನಲ್ಲಿ ಪೌಷ್ಟಿಕ ಆಹಾರದ ಕೊರತೆಯ ಮಟ್ಟ ತೀರ ಹೆಚ್ಚಿದೆ. ಗುಜರಾತಿನ ಮಕ್ಕಳಲ್ಲಿನ ಅಪೌಷ್ಟಿಕತೆಯ ಮಟ್ಟವು ಛತ್ತೀಸ್‌ಘರ್ ಮತ್ತು ಒರಿಸ್ಸಾದಷ್ಟೆ ಇದೆ. ಇತ್ತೀಚಿನ ಯೂನಿಸೆಫ್ ವರದಿಯ ಪ್ರಕಾರ **"ಗುಜರಾತಿನ ಪ್ರತಿ ಇಬ್ಬರು ಮಕ್ಕಳಲ್ಲಿ ಒಬ್ಬರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ ಮತ್ತು ಪ್ರತಿ ನಾಲ್ಕರಲ್ಲಿ ಮೂರು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಪ್ರತಿ ಮೂರು ತಾಯಂದಿರಲ್ಲಿ ಒಬ್ಬರು ಪೌಷ್ಟಿಕತೆಯ ತೀವ್ರ ಕೊರತೆಯಿಂದ ಹೆಣಗಾಡುತ್ತಿದ್ದಾರೆ."** ಭಾರತ ಸರ್ಕಾರದ 'ಭಾರತದಲ್ಲಿ ಮಕ್ಕಳು' ವರದಿಯಲ್ಲಿ(2012) ಸಾಮಾಜಿಕ ಅಭಿವೃದ್ಧಿಯ ಮೂಲ ಸೂಚ್ಯಾಂಕಗಳಲ್ಲಿ ಶಿಶು ಮರಣ ದರವನ್ನು ಪ್ರಮುಖವೆಂದು ಪರಿಗಣಿಸಲಾಗುತ್ತದೆ. ಈ ಶಿಶು ಮರಣ ದರವು ಗುಜರಾತಿನಲ್ಲಿ ಪ್ರತಿ 1000ಕ್ಕೆ 44 ಇದ್ದು 11 ರಾಜ್ಯಗಳಲ್ಲಿ ಅತ್ಯಂತ ಕನಿಷ್ಠ ಮಟ್ಟದಲ್ಲಿ ಗುಜರಾತ್ ಇದೆ. ಇದಕ್ಕೆ ಮುಖ್ಯ ಕಾರಣ ಗುಜರಾತಿನಲ್ಲಿ ಮಹಿಳೆಯರು ತಮ್ಮ ದೇಹದ ಸೌಂದರ್ಯ ಕಾಪಾಡಿಕೊಳ್ಳಲು ಪಥ್ಯ (ಡಯಟ್) ಮಾಡುತ್ತಿದ್ದಾರೆ ಎಂಬ ಸಂವೇದನಾರಹಿತ ಹೇಳಿಕೆಯ ಮೂಲಕ "ಚೈತನ್ಯಭರಿತ ಗುಜರಾತಿ"ನ ಬಡವರು ಮತ್ತು ದುಡಿಯುವ ಜನರ ಬಗೆಗಿನ ಮುಖ್ಯಮಂತ್ರಿ ಮೋದಿಯ ಅಸಡ್ಡೆಯ ಧೋರಣೆ ಎಂದು ಹೇಳಬಹುದು.

## ರಾಷ್ಟ್ರೀಯ ಆಹಾರ 'ಅಭದ್ರತೆಯ' ಕಾಯಿದೆ: ಕಳೆದುಕೊಂಡ ಅವಕಾಶ

'ನೂರು ದಿನಗಳ ಭರವಸೆ'ಯ ನಾಲ್ಕು ವರ್ಷಗಳ ನಂತರ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ ಅಂತಿಮವಾಗಿ ಸಂಸತ್ತಿನ ಎರಡೂ ಸದನಗಳಲ್ಲಿ ಅಂಗೀಕಾರವಾಯಿತು; ಸರ್ಕಾರದ ಗೋದಾಮುಗಳಲ್ಲಿ 70 ಮಿಲಿಯನ್ ಟನ್ನುಗಳ ಆಹಾರಧಾನ್ಯ ಇರುವ ಸಮಯದಲ್ಲಿ ಕಾಯಿದೆ ಅಂಗೀಕಾರವಾಗಿದೆ. ನಿಗದಿತ ಕನಿಷ್ಠ ದಾಸ್ತಾನಿನ ನಾಲ್ಕು ಪಟ್ಟಿಗಿಂತಲೂ ಹೆಚ್ಚು ಅದು! ಮಿತಿಮೀರಿದ ದಾಸ್ತಾನನ್ನು ಹೊಂದಿ ಯಾವುದೇ ಪೂರೈಕೆಯ ನಿರ್ಬಂಧವೂ ಇಲ್ಲದ ನಿಜವಾಗಿಯೂ ಚಾರಿತ್ರಿಕ ಅವಕಾಶ ಸಿಕ್ಕ ಸಂದರ್ಭ ಅದಾಗಿತ್ತು. ಆದರೆ ಈ ಕಾಯಿದೆಯು ಅವಶ್ಯಕತೆಗಿಂತಲೂ ಬಹಳ ಕಡಿಮೆ ಇತ್ತು ಮತ್ತು ಶೇ. 67 ಭಾರತೀಯ ಕುಟುಂಬಗಳಿಗೆ ಪ್ರತಿ ತಿಂಗಳೂ ಕೇವಲ 5ಕೆಜಿಯನ್ನು ಮಾತ್ರ ಅದು ಖಾತರಿಪಡಿಸಿತ್ತು; ಪಟ್ಟಣ ಪ್ರದೇಶಗಳಲ್ಲಿ ಶೇ. 75 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶೇ. 50. ಇದು ಐಸಿಎಂ ನಿಗದಿ ಪಡಿಸಿದ ಕನಿಷ್ಠ 14 ಕೆಜಿ ಅಗತ್ಯಕ್ಕಿಂತಾ ತೀರ ಕಡಿಮೆ. ಏಕದಳ ಆಹಾರ ಧಾನ್ಯ ಮಾತ್ರ ಎಂಬ ಧೋರಣೆ ಮತ್ತು ಸಕ್ಕರೆ, ಬೇಳೆಗಳು, ಎಣ್ಣೆ ಮತ್ತಿತರ ಜೀವನಾವಶ್ಯಕ ವಸ್ತುಗಳ ಲಭ್ಯತೆಯನ್ನು ಒದಗಿಸದಿರುವುದು ಸರಿಯಲ್ಲ. ವ್ಯಾಪಕ ಅಪೌಷ್ಟಿಕತೆಯಿಂದ ಜನ ಬಳಲುತ್ತಿರುವಾಗ ಮೂರನೇ ಒಂದು ಭಾಗದ ಭಾರತೀಯರನ್ನು ಹೊರಗಿಟ್ಟಿರುವುದು ಅಸಮರ್ಥನೀಯವಾದದ್ದು; ಆದರೆ ತೆರಿಗೆ ಪಾವತಿಸುವವರನ್ನು ಮಾತ್ರ ಹೊರತುಪಡಿಸಬಹುದು ಎಂಬ ಸಿಪಿಐ(ಎಂ)ನ

ಸಲಹೆಯನ್ನು ಕಡೆಗಣಿಸಲಾಯಿತು.

ಏರುತ್ತಿರುತ್ತಲೇ ಇರುವ ಎಲ್ಲಾ ಜೀವನಾವಶ್ಯಕ ವಸ್ತುಗಳ ಬೆಲೆಗಳು ಮತ್ತು ಹರಡುತ್ತಿರುವ ಹಸಿವಿನ ಜಾಡ್ಯ ಹಾಗೂ ಅಪೌಷ್ಟಿಕತೆಗಳಿಂದ ಈಗಾಗಲೇ ಬಳಲುತ್ತಿರುವ ಜನರ ಮೇಲೆ ಇನ್ನೂ ಹೊರೆಯನ್ನು ಹೊರಿಸಲು ಕೇಂದ್ರದ ಯುಪಿಎ ಸರ್ಕಾರವು ಹಠ ಹಿಡಿದಿದೆ. ಆಹಾರ ಭದ್ರತೆ ಮತ್ತು ಬೆಲೆಗಳ ವಿಷಯದಲ್ಲಿ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದ ಕಳಪೆ ಸಾಧನೆಯ ಹಿನ್ನೆಲೆಯಲ್ಲಿ ಸಿಪಿಐ(ಎಂ)ನ ಈ ಕೆಳಗಿನ ಹಕ್ಕೊತ್ತಾಯಗಳನ್ನು ಯುಪಿಎ ಸರ್ಕಾರವು ಸತತವಾಗಿ ಕಡೆಗಣಿಸುತ್ತಲೇ ಬಂದಿದೆ:

- ಇಂಧನಗಳ ಬೆಲೆ ಏರಿಕೆಯನ್ನು ಹಿಂತೆಗೆದುಕೊಳ್ಳಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಪರೋಕ್ಷ ತೆರಿಗೆಗಳನ್ನು ಕಡಿಮೆಮಾಡಿ ಹಾಗೂ ಹಿಂದೆ ಜಾರಿಯಲ್ಲಿದ್ದ ನಿಯಂತ್ರಣವನ್ನು ಮತ್ತೆ ತನ್ನಿ;
- ಸಬ್ಸಿಡಿ ಹೆಚ್ಚಿಸುವ ಮೂಲಕ ಗೊಬ್ಬರದ ಬೆಲೆಯನ್ನು ನಿಯಂತ್ರಿಸಿ;
- ಆಹಾರ ಸಬ್ಸಿಡಿಯನ್ನು ಹೆಚ್ಚಿಸುವ ಮೂಲಕ ಶಕ್ತವಾದ ಪಡಿತರ ವ್ಯವಸ್ಥೆಯನ್ನು ವಿಸ್ತರಿಸಿ ಮತ್ತು ಸಾರ್ವತ್ರೀಕರಿಸಿ;
- ಸಕ್ಕರೆ, ಗೋಧಿ ಮತ್ತಿತರ ಜೀವನಾವಶ್ಯಕ ವಸ್ತುಗಳ ಸಟ್ಟಾ ವ್ಯಾಪಾರವನ್ನು ನಿಷೇಧಿಸಿ ಮತ್ತು ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಿ;
- ಬಂಡವಾಳ ಹರಿವಿನ ಚಂಚಲತೆಯನ್ನು ನಿಯಂತ್ರಿಸಲು ಕಟ್ಟುನಿಟ್ಟಾದ ಮತ್ತು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಿ ಹಾಗೂ ರೂಪಾಯಿಯನ್ನು ಸ್ಥಿರಗೊಳಿಸಿ.

ಪರ್ಯಾಯ ಆರ್ಥಿಕ ನೀತಿಗಳಿಂದ ಮಾತ್ರವೇ ಅಪೌಷ್ಟಿಕತೆಯಿಂದ ನರಳುತ್ತಿರುವ ಅಪಾರ ಸಂಖ್ಯೆಯ ಜನರ–ಅದರಲ್ಲೂ ಮಹಿಳೆಯರು ಮತ್ತು ಮಕ್ಕಳ–ಆಹಾರ ಭದ್ರತೆ ಹಾಗೂ ಬೆಲೆ ಸ್ಥಿರತೆಯನ್ನು ಖಾತ್ರಿಪಡಿಸಬಹುದು ಎಂದು ಸಿಪಿಐ(ಎಂ) ಹೇಳುತ್ತದೆ.

ಬಿಜೆಪಿಯಾಗಲೀ ಕಾಂಗ್ರೆಸ್ಸಾಗಲೀ ಅಂತಹ ಪರ್ಯಾಯವನ್ನು ಒದಗಿಸಲು ಸಾಧ್ಯವಿಲ್ಲ.

ಆಹಾರ ಭದ್ರತೆ, ಆಹಾರ ಸಬ್ಸಿಡಿ ಹೆಚ್ಚಿಸುವುದು, ಪಡಿತರ ಪದ್ಧತಿಯನ್ನು ಸಾರ್ವತ್ರೀಕರಿಸುವುದು ಮತ್ತು ಬಲಪಡಿಸುವುದು, ಬೆಲೆ ಏರಿಕೆಯ ನಿಯಂತ್ರಣ ಮತ್ತು ಹಸಿವು ಹಾಗೂ ಅಪೌಷ್ಟಿಕತೆಯನ್ನು ಕೊನೆಗೊಳಿಸುವುದು ಮುಂತಾದವುಗಳಿಗೆ ಪ್ರಾಮುಖ್ಯತೆ ನೀಡಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ಕಟಿಬದ್ಧವಾಗಿವೆ.

ಅನುವಾದ: **ಟಿ.ಸುರೇಂದ್ರ ರಾವ್**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

## ಒಂದು ಜಾತ್ಯಾತೀತ ಮತ್ತು
## ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು ಪ್ರತಿಗಳು: 3,000